

**ದಾರಿಯೊ ಫೊ (ಇಟಲಿ)**

# ಅಂತಾರಾಷ್ಟ್ರೀಯ ರಂಗಸಂಸ್ಥೆ (ಐ.ಟಿ.ಐ)

## ಅಂತಾರಾಷ್ಟ್ರೀಯ ರಂಗಸಂದೇಶ ೨೦೧೩

ಬಹಳ ಹಿಂದೆ ಅಧಿಕಾರಿಶಾಹಿಗಳು ಅಸಹನೆಯಿಂದ ***ಕಮಿಡಿಯನ್ ಡೆಲ್ ಆರ್ಟ್*** (ಮುಖವಾಡ ಧರಿಸಿ ಪ್ರದರ್ಶಿಸುವ ಕಲೆ) ಕಲಾವಿದರನ್ನು ಬೆನ್ನಟ್ಟಿ ದೇಶದಿಂದ ಹೊರದಬ್ಬಿದರು.
ಇಂದು ಬಿಕ್ಕಟ್ಟಿನ ಪರಿಸ್ಥಿತಿಯಿಂದ ಕಲಾವಿದರಿಗೆ, ರಂಗತಂಡಗಳಿಗೆ ಪ್ರದರ್ಶನ ನೀಡಲು ಸಾರ್ವಜನಿಕ ಸ್ಥಳ ಮತ್ತು ಪ್ರೇಕ್ಷಕರು ಸಿಗುವುದು ಕಷ್ಟಕರವಾಗಿದೆ.
ಕಲಾವಿದರು ತಮ್ಮ ವ್ಯಂಗ್ಯ ಮತ್ತು ಅಣಕವಾಡುಗಳನ್ನು ಅಭಿವ್ಯಕ್ತಪಡಿಸಲು ಪ್ರೇಕ್ಷಕರಿಲ್ಲದೆ, ಪ್ರದರ್ಶನ ಮಾಡಲು ಜಾಗವಿಲ್ಲದೆ, ಆಡಳಿತಾರೂಢರಿಗೆ ಇದನ್ನು ನಿಯಂತ್ರಿಸುವ ಪ್ರಮೇಯವೇ ಇಲ್ಲವಾಗಿದೆ. ಇದಕ್ಕೆ ವಿರುದ್ಧವಾಗಿ ಇಟಲಿಯ ನವೋದಯ (ಪುನರುಜ್ಜೀವನ) ಕಾಲದಲ್ಲಿ ಅಪಾರ ಪ್ರೇಕ್ಷಕರನ್ನು ಹೊಂದಿದ್ದ ವಿದೂಷಕರನ್ನು (***ಕಮಿಡಿಯಾಂಟಿ***) ಹತ್ತಿಕ್ಕಲು ಅಧಿಕಾರದಲ್ಲಿದ್ದವರು
ಗಣನೀಯ ಪ್ರಮಾಣದಲ್ಲಿ ಪ್ರಯಾಸಪಡಬೇಕಾಯಿತು.

ಪ್ರತಿಸುಧಾರಣಾ ಶತಮಾನದಲ್ಲಿ *ಕಮಿಡಿಯನ್ ಡೆಲ್ ಆರ್ಟ್* ನಟರ ವಲಸೆ ನಡೆಯಿತೆನ್ನುವುದು ತಿಳಿದದ್ದೆ, ಪ್ರಮುಖವಾಗಿ ಅವರು ಪವಿತ್ರ ನಗರವನ್ನು ನಿಂದಿಸಿದ ಆರೋಪದಿಂದಿದ್ದ ರೋಮ್‌ನಲ್ಲಿನ ರಂಗಸ್ಥಳಗಳನ್ನು ಕೆಡಹುವ ಕಾಯಿದೆ ಜಾರಿಗೊಳಿಸಲಾಯಿತು. ಮಧ್ಯಮವರ್ಗದ ಶ್ರಿಮಂತ ಸಂಪ್ರದಾಯಸ್ತರ ಮತ್ತು ಧಾರ್ಮಿಕ ಪ್ರತಿಪಾದಕರ ಸತತ ಒತ್ತಾಯಪೂರ್ವಕ ಮನವಿಗಳ ಮೇರೆಗೆ, ಹಾಗೂ ನೀತಿಬೋಧಕರ ಪ್ರಕಾರ ಅತಿಹೆಚ್ಚು ಅಶ್ಲೀಲ ಪ್ರದರ್ಶನಗಳಾದ ***ಟೋರ್ಡಿನೋನ*** ರಂಗಸ್ಮಾರಕವನ್ನು ನಾಶಪಡಿಸಲು ೧೬೯೮ರಲ್ಲಿ ಪೋಪ್ ಇನ್ನೊಸೆಂಟ್ ೧೨ ಆದೇಶ ಹೊರಡಿಸಿದರು.

ಪ್ರತಿಸುಧಾರಣಾ ಸಮಯದಲ್ಲಿ ಉತ್ತರ ಇಟಲಿಯ (ಪಾದ್ರಿ) ಕಾರ್ಲೊ ಬೊರೊಮಿಯೊ ಸಕ್ರಿಯವಾಗಿ ಮಿಲನ್ನಿನ ನಾಗರಿಕರ ಬಿಡುಗಡೆಗೆ ಬದ್ಧರಾಗಿದ್ದರು. ಅಲ್ಲದೆ ಉನ್ನತ ಆಧ್ಯಾತ್ಮಿಕ ಶಿಕ್ಷಣ ರೂಪವಾದ ಕಲೆ, ಮತ್ತು, ಧರ್ಮನಿಂದನೆ ಸ್ವಪ್ರತಿಷ್ಠೆ ಅಭಿವ್ಯಕ್ತಿಸುವ ರಂಗಭೂಮಿ – ಇವೆರಡರ ನಿರ್ದಿಷ್ಟ ಪ್ರತ್ಯೇಕತೆಯನ್ನು ಪ್ರತಿಪಾದಿಸಿದರು. ಈ ಹೆಣಗಾಟಗಳ ಹೊರಗೆ ನಾನು ಉಲ್ಲೇಖಿಸುವುದೇನೆಂದರೆ, ಅವರು ತನ್ನ ಸಹಯೋಗಿಗಳಿಗೆ ಬರೆದ ಪತ್ರದಲ್ಲಿನ ಸಾರಾಂಶ ಹೆಚ್ಚುಕಡಿಮೆ ಇಂತಿದೆ – " ಈ ಕೆಟ್ಟ ಕಳೆಯನ್ನು ನಾಶಮಾಡುವ ನಿಟ್ಟಿನಲ್ಲಿ ಕುಖ್ಯಾತ ಭಾಷಣಗಳೊನ್ನೊಳಗೊಂಡ ಪಠ್ಯಗಳನ್ನು ಸುಟ್ಟುಹಾಕಿ ಜನಮಾನಸದಿಂದ ಅಳಿಸುವುದರ ಜೊತೆಗೆ ಅದನ್ನು ಪ್ರಕಟಿಸುವಲ್ಲಿ ನಿರತರಾದವರನ್ನು ಶಿಕ್ಷೆಗೆ ಒಳಪಡಿಸುವುದಕ್ಕೆ ಮಿತಿಮೀರಿ ಪ್ರಯತ್ನಿಸಿದ್ದೇವೆ. ಇಷ್ಟಾದರು ನಮ್ಮ ಗಮನಕ್ಕೆ ಬಾರದಂತೆ ಈ ದುಷ್ಟಶಕ್ತಿ ಕುಯುಕ್ತಿಯಿಂದ ಪುನಶ್ಚೇತನಗೊಂಡಿತು. ಪಠ್ಯಗಳನ್ನು ಓದಿತಿಳಿಯುವುದಕ್ಕಿಂತ ಕಣ್ಣೆದುರಿಗೆ ನಡೆಯುವ ದೃಶ್ಯಗಳು ಮನಸ್ಸಿಗೆ ಇನ್ನೂ ಹೆಚ್ಚು ಆಳವಾಗಿ ನಾಟುವಂತಾಯಿತಲ್ಲ! ಪುಸ್ತಕದಲ್ಲಿ ಅಚ್ಚಾದ ನಿರ್ಜೀವ ಅಕ್ಷರಗಳಿಗಿಂತ ಸೂಕ್ತ ಹಾವ-ಭಾವಗಳ ಜೊತೆಗೆ ಆಡಿದ ಮಾತಿನಿಂದ ಹದಿಹರೆಯದವರ, ಯುವತಿಯರ ಬೌದ್ಧಿಕತೆ ನಾಶವಾಗುವುದು. ಆದ್ದರಿಂದ ಬೇಡದ ಆತ್ಮಗಳನ್ನು ದೂಡುವಂತೆ ರಂಗಭೂಮಿ

ನಿರ್ಮಾಪಕರನ್ನು ತುರ್ತಾಗಿ ನಮ್ಮ ನಗರಗಳಿಂದ ತೊಲಗಿಸಬೇಕಾಗಿದೆ"

ಈ ಬಿಕ್ಕಟ್ಟನ್ನು ಎದುರಿಸುವ ಒಂದೇ ಒಂದು ಪರಿಹಾರವೆಂದರೆ ನಮ್ಮಗಳ ವಿರುದ್ಧ ಮತ್ತು ವಿಶೇಷವಾಗಿ ರಂಗಕಲೆಯನ್ನು ಕಲಿಯಲಿಚ್ಛಿಸುವ ಯುವಜನತೆಯ ವಿರುದ್ಧ ಒಂದು ವ್ಯವಸ್ಥಿತ ಬೃಹತ್ ಬಹಿಷ್ಕಾರವಾಗಬೇಕೆಂದು ಆಶಿಸುವುದು: ಹೀಗೆ ಚದುರಿಹೋಗುವ ವಿದೂಷಕರು (***ಕಮೆಡಿಯಾಂಟಿ***), ರಂಗನಿರ್ಮಾಪಕರನ್ನು ಹೊಸ ರೀತಿಯ ಪ್ರಾತಿನಿಧಿತ್ವಕ್ಕೆ ನಿಸ್ಸಂದೆಹವಾಗಿ ಈ ಹೇರಿಕೆಯಿಂದ ಅನೂಹ್ಯ ಲಾಭ ಪಡೆಯಬಹುದು.

<u>**ದಾರಿಯೊ ಫೊ** ಕಿರುಪರಿಚಯ:</u>

ಇಟಲಿಯ ವಿಡಂಬನಕಾರ, ನಾಟಕಕಾರ, ನಟ ಮತ್ತು ಸಂಯೋಜಕ, ೧೯೯೭ರ ನೋಬೆಲ್ ಪ್ರಶಸ್ತಿ ಪುರಸ್ಕೃತ ದಾರಿಯೊ ಫೊ ಹುಟ್ಟಿದ್ದು ಮಾರ್ಚ ೨೪,೧೯೨೬. ಶ್ರಮಿಕ ವರ್ಗದಲ್ಲಿ ಜನಪ್ರಿಯವಾಗಿದ್ದ ಇಟಲಿಯ *ಕಮಿಡಿಯನ್ ಡೆಲ್ ಆರ್ಟೆ ಎಂಬ* ಪ್ರಾಚೀನ ರಂಗಶೈಲಿಯಲ್ಲಿದ್ದ ಅವರ ಕೃತಿಗಳು, ಸಂಘಟಿತ ಅಪರಾಧ, ರಾಜಕೀಯ ಭ್ರಷ್ಟಾಚಾರ, ರಾಜಕೀಯ ಹತ್ಯೆ ಮತ್ತು ಕ್ಯಾಥೊಲಿಕ್ ಚರ್ಚ್ ಸಿದ್ಧಾಂತದ ಟೀಕೆಗಳನ್ನೊಳಗಂಡಿತ್ತು. ಅವರ ಪ್ರಮುಖ ನಾಟಕಗಳ ಆಂಗ್ಲ ಅನುವಾದಗಳೆಂದರೆ ಕಾಮಿಕ್ ಮಿಸೆರಿ (೧೯೭೩), ಆಕ್ಸಿಡೆಂಟಲ್ ಡೆಥ್ ಆಫ್ ಎನ್ ಅನಾರ್ಕಿಸ್ಟ್, ವಿ ಕಾಂಟ್ ಪೆ ವಿ ವೋಂಟ್ ಪೆ (೧೯೭೪). ಪತ್ನಿ ಫ್ರಾಂಕ್ ರಾಮೆ ಅವರೊಡನೆ ಸಹರಚನೆ ಮಾಡಿದ ನಾಟಕಗಳು ಆಲ್ ಹೌಸ್ ಬೆಡ್ ಆಂಡ್ ಚರ್ಚ್ (೧೯೭೮), ಟ್ರಂಪೆಟ್ಸ ಆಂಡ್ ರಾಸ್ಬೆರೀಸ್ (೧೯೮೧), ದಿ ಓಪನ್ ಕಪಲ್ – ವೈಡ್ ಓಪನ್ ಈವನ್ (೧೯೮೩), ಒನ್ ವಾಸ್ ನ್ಯೂಡ್ ಆಂಡ್ ಒನ್ ವೋರ್ ಟೈಲ್ಸ್ (೧೯೮೫), ದಿ ಪೋಪ್ ಆಂಡ್ ದಿ ವಿಚ್ (೧೯೮೯) ಹೀಗೆ ಸುಮಾರು ೭೦ಕ್ಕೂ ಹೆಚ್ಚು ನಾಟಕಗಳನ್ನು ರಚಿಸಿದ್ದಾರೆ ಮತ್ತು ಅವುಗಳು ಹಲವು ಭಾಷೆಗಳಿಗೆ ರೂಪಾಂತರಗೊಂಡಿವೆ. ಸಂದರ್ಭೋಚಿತವಾಗಿ ಸ್ಥಳೀಯ ರಾಜಕೀಯ ಹಾಗು ಇನ್ನಿತರ ವಿಷಯಗಳನ್ನು ಬಿಂಬಿಸುವಂತೆ ತಮ್ಮ ನಾಟಕಳನ್ನು ಮಾರ್ಪಡಿಸುವಂತೆ ಫೊ ನಿರ್ದೇಶಕರನ್ನು ಹಾಗು ಅನುವಾದಕರನ್ನು ಪ್ರೋತ್ಸಾಹಿಸುತ್ತಾರೆ.

------***------

**(ಸೂಚನೆ: ಮಾರ್ಚ ೨೭ರ ವಿಶ್ವರಂಗಭೂಮಿ ದಿನಾಚರಣೆಯಂದು ನಡೆಯಲಿರುವ ರಂಗಸಂಬಂಧಿ ಚಟುವಟಿಕೆಗಳ ಆರಂಭದಲ್ಲಿ ಈ ರಂಗಸಂದೇಶ ವಾಚಿಸುವುದು ಹಾಗೂ ಛಾಯಚಿತ್ರದೊಂದಿಗೆ ಕಾರ್ಯಕ್ರಮದ ವರದಿ ಕೆಳಕಂಡ ಇ-ಮೈಲ್‌ಗೆ ಕಳುಹಿಸುವುದು ಅಪೇಕ್ಷಣೀಯ )**

ಕನ್ನಡಕ್ಕೆ **ಶ್ರೀಕಂಠ ಗುಂಡಪ್ಪ**

ಹಿರಿಯ ರಂಗಕರ್ಮಿ, ಮೈಸೂರು

ಈಶಾನ್ಯ ನಂ.೫೭, ೩ನೆ ಮೈನ್, ೩ನೆ ಕ್ರಾಸ್, ಬ್ಯಾಂಕ್ ಕಾಲೊನಿ, ಬೊಗಾದಿ, ಮೈಸೂರು – ೫೭೦೦೨೬

**sreekanta.gundappa@gmail.com**

ಮೋ:೯೯೮೭೦೦೭೭೨೫